**KARNATAK UNIVERSITY, DHARWAD**

**EXAMINATION SECTION, K.U.DHARWAD**

**Registrar (Evaluation)** **0836-2215375**

---

Ref: No.KU/Exam/RVCell/2022/07 Date: 7/5/2023

## ಸುತ್ತೋಲೆ

ವಿಷಯ:- ಪದವಿ ತರಗತಿಗಳ (CBCS and NON CBCS) ಮರು ಮೌಲ್ಯಮಾಪನ/ಶರತ್ ಮೌಲ್ಯಮಾಪನಕ್ಕೆ ಅಂತರ್‌ಜಾಲದ ಮುಖಾಂತರ ಅರ್ಜಿಸಲ್ಲಿಸುವ ವ್ಯವಸ್ಥೆ ಕುರಿತು.

ಉಲ್ಲೇಖ: No.KU/Exam/RV Cell/2018/247 Dated: 31-07-2018

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಟ್ಟ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳ ಗಮನಕ್ಕೆ ತರಬಯಸುವುದೇನೆಂದರೆ ಎಲ್ಲಾ ಪದವಿ ತರಗತಿಗಳ (CBCS and NON CBCS) ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನ/ಶರತ್ ಮೌಲ್ಯಮಾಪನ/ಅಂಕಗಳ ಮರು ಎಣಿಕೆ/ಛಾಯಾ ಪ್ರತಿ ಮುಂತಾದ ಕಾರ್ಯಗಳನ್ನು ತ್ವರಿತಗತಿಯಲ್ಲಿ ಕೈಗೊಳ್ಳಲು ಅನುಕೂಲವಾಗುವಂತೆ **ಅಂತರ್‌ಜಾಲ (Online) ಮುಖಾಂತರ** ಅರ್ಜಿ ಸಲ್ಲಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಕಾರಣ, ಸಂಬಂಧಪಟ್ಟ ಪದವಿ ತರಗತಿಗಳ ಫಲಿತಾಂಶ ಅಂತರ್‌ಜಾಲದಲ್ಲಿ ಪ್ರಕಟಗೊಂಡ ದಿನಾಂಕದಿಂದ 10 ದಿನಗಳೊಳಗಾಗಿ ವಿದ್ಯಾರ್ಥಿಗಳಿಂದ ಅಂತರ್‌ಜಾಲದಲ್ಲಿ ದೊರೆಯುವ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಈ ಕೆಳಗೆ ನಮೂದಿಸಿದ ಶುಲ್ಕದೊಂದಿಗೆ ಮಹಾವಿದ್ಯಾಲಯಕ್ಕೆ ಭರಿಸಿಕೊಳ್ಳುವುದು. ತದನಂತರ 12ನೇ ದಿನಗಳೊಳಗಾಗಿ ವಿದ್ಯಾರ್ಥಿಗಳು ಸಲ್ಲಿಸಿದ ಅರ್ಜಿಗಳ ಎಲ್ಲಾ ವಿವರಗಳನ್ನು ಮಹಾವಿದ್ಯಾಲಯವು ವಿಶ್ವವಿದ್ಯಾಲಯಕ್ಕೆ ಅಂತರ್‌ಜಾಲ (Online) ಮುಖಾಂತರ (Up-load) ಮಾಡುವುದು ಹಾಗೂ ವಿದ್ಯಾರ್ಥಿಗಳಿಂದ ಭರಿಸಿಕೊಂಡ ಶುಲ್ಕವನ್ನು ಅಂತರ್‌ಜಾಲ (Online) ಮುಖಾಂತರ ಹಣಕಾಸು ವಿಭಾಗಕ್ಕೆ ಜಮಾಯಿಸುವುದು. 14ನೇ ದಿನದೊಳಗಾಗಿ ಶುಲ್ಕದ ವಿವರಗಳನ್ನೊಳಗೊಂಡ ಪಟ್ಟಿಯೊಂದಿಗೆ ವಿದ್ಯಾರ್ಥಿಗಳ ಅರ್ಜಿಗಳನ್ನು (ಹಾರ್ಡ ಪ್ರತಿ) ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದ ಮರು ಮೌಲ್ಯಮಾಪನ ಕೋಶಕ್ಕೆ ಸಲ್ಲಿಸುವುದು.

ಪರೀಕ್ಷಾ ಶುಲ್ಕ ಹಾಗೂ ಇನ್ನಿತರ ವಿವರಗಳು:

೧. ಮರು ಮೌಲ್ಯಮಾಪನ/ಶರತ್ ಮೌಲ್ಯಮಾಪನಕ್ಕಾಗಿ ಸಲ್ಲಿಸುವ ಅರ್ಜಿಗಳ ಜೊತೆಗೆ ಅಂತರ್‌ಜಾಲದಲ್ಲಿ ದೊರೆಯುವ ವಿದ್ಯಾರ್ಥಿಗಳ ಫಲಿತಾಂಶದ ಅಂಕಗಳ ಪಟ್ಟಿಯೊಂದಿಗೆ ಸಲ್ಲಿಸುವುದು. ( ಮೂಲ ಅಂಕಪಟ್ಟಿಯ ಅವಶ್ಯವಿರುವುದಿಲ್ಲ).

೨. ಗರಿಷ್ಠ ೨ ವಿಷಯಗಳಿಗೆ (ಅಂದರೆ ೧೦೦ ಅಂಕಗಳ (ಆಯ್‌ಎ ಅಂಕ ಹೊರತುಪಡಿಸಿ) ಇರುವ ಎರಡು ಉತ್ತರ ಪತ್ರಿಕೆಗಳಿಗೆ) ಮರು ಮೌಲ್ಯಮಾಪನ ಅಥವಾ ಶರತ್ ಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಬಹುದು. ಆದರೆ ಪ್ರಾಯೋಗಿಕ ಪರೀಕ್ಷೆ, ಪ್ರೌಡಪ್ರಬಂಧ (Dissertation), ಓ.ಎಂ.ಆರ್ ಮೂಲದ ಉತ್ತರ ಪತ್ರಿಕೆ, ಆಂತರಿಕ ವಿಷಯಗಳ ಮರುಮೌಲ್ಯಮಾಪನಕ್ಕೆ ಅವಕಾಶವಿರುವುದಿಲ್ಲ.

೩. ಬಿ.ಎ/ಬಿ.ಎಸ್‌ಸಿ ತರಗತಿಗಳ ಐಚ್ಛಿಕ ವಿಷಯಗಳಲ್ಲಿ ೦೨ ಅಥವಾ ೦೨ ಕ್ಕಿಂತ ಹೆಚ್ಚು ಪೇಪರುಗಳು ಇದ್ದಲ್ಲಿ, ಅದೇ ವಿಷಯದಲ್ಲಿ ಗರಿಷ್ಠ ೦೨ ಉತ್ತರ ಪತ್ರಿಕೆಗಳಿಗೆ ಅಥವಾ ಬೇರೆ ಬೇರೆ ಐಚ್ಛಿಕ ವಿಷಯಗಳ ಅಥವಾ ಭಾಷಾ ವಿಷಯಗಳ ತಲಾ ೦೧ ಉತ್ತರ ಪತ್ರಿಕೆಗೆ ಮರು ಮೌಲ್ಯಮಾಪನ/ಶರತ್ ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸತಕ್ಕದ್ದು. ಯಾವುದೇ ಕಾರಣಕ್ಕೂ ಪ್ರತಿ ಸೆಮಿಸ್ಟರ್/ವಾರ್ಷಿಕ ಪರೀಕ್ಷೆಗಳಲ್ಲಿ ಗರಿಷ್ಠ ೦೨ ಉತ್ತರ ಪತ್ರಿಕೆಗಳಿಗೆ ಮಾತ್ರ ಮರು/ಶರತ್ ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಬಹುದು.

೪. ಮರು ಮೌಲ್ಯಮಾಪನಕ್ಕೆ ಆಯ್ಕೆ ಮಾಡಿಕೊಂಡ ಉತ್ತರ ಪತ್ರಿಕೆಯನ್ನು ಶರತ್ ಮೌಲ್ಯಮಾಪನಕ್ಕೆ ಆಯ್ಕೆ ಮಾಡಿಕೊಳ್ಳತಕ್ಕದ್ದಲ್ಲ. ಅದೇ ರೀತಿ ಶರತ್ ಮೌಲ್ಯಮಾಪನದ ಉತ್ತರ ಪತ್ರಿಕೆಯನ್ನು ಮರು ಮೌಲ್ಯಮಾಪನಕ್ಕೆ ಆಯ್ಕೆ ಮಾಡಿಕೊಳ್ಳತಕ್ಕದ್ದಲ್ಲ.

೫. ಪ್ರತಿ ಸೆಮಿಸ್ಟರ್‌ನಲ್ಲಿ ಮೇಲ್ಕಂಡ ವಿಷಯಕ್ಕೊಳಪಟ್ಟಂತೆ ಗರಿಷ್ಠ ಎರಡು ಉತ್ತರ ಪತ್ರಿಕೆಗಳಿಗೆ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಬಹುದು. ಒಟ್ಟಾರೆಯಾಗಿ ೬ ಸೆಮಿಸ್ಟರ್ ಪದವಿ ತರಗತಿಗಳಲ್ಲಿ 06ಕ್ಕಿಂತ ಹೆಚ್ಚು ಅವಧಿಗಳಲ್ಲಿ, 04 ಸೆಮಿಸ್ಟರ್ ಪದವಿ ತರಗತಿಗಳಲ್ಲಿ 04 ಕ್ಕಿಂತ ಹೆಚ್ಚು ಅವಧಿಗಳಲ್ಲಿ ಹಾಗೂ 02 ಸೆಮಿಸ್ಟರ್ ತರಗತಿಯಲ್ಲಿ 02ಕ್ಕಿಂತ ಹೆಚ್ಚು ಬಾರಿ ಮರು/ಶರತ್ ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವಂತಿಲ್ಲ.

೬. ಪ್ರಾಯೋಗಿಕ, ಡೆಜರ್ಟೇಶನ್, ಓ.ಎಂ.ಆರ್ ಮೂಲದ ಉತ್ತರ ಪತ್ರಿಕೆ ಮುಂತಾದ ವಿಷಯಗಳನ್ನು ಹೊರತುಪಡಿಸಿ, ಲಿಖಿತ (Theory) ಉತ್ತರ ಪತ್ರಿಕೆಗಳ ಮರು ಎಣಿಕೆ ಮತ್ತು ಛಾಯಾ ಪ್ರತಿಗಳಿಗೆ ಅರ್ಜಿ ಸಲ್ಲಿಸಲು ಗರಿಷ್ಠ ವಿಷಯಗಳಲ್ಲಿ ನಿರ್ಭಂಧವಿಲ್ಲ.

**KARNATAK UNIVERSITY,**

**DHARWAD**

**EXAMINATION SECTION, K.U.DHARWAD**

**Registrar (Evaluation)** **0836-2215375**

---



೭. ಶುಲ್ಕದ ವಿವರ: (ಮಾರ್ಚ 2023 ರ ಪರೀಕ್ಷೆ ಸಂಬಂಧಿಸಿದ್ದು)

| | | |
|---|---|---|
| i. | ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನಕ್ಕೆ (ಕಾನೂನು ಪದವಿ ಹೊರತುಪಡಿಸಿ) ಪ್ರತಿ ಉತ್ತರ ಪತ್ರಿಕೆಗೆ | ರೂ. 590=000 |
| ii. | ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನಕ್ಕೆ ಪ್ರತಿ ಉತ್ತರ ಪತ್ರಿಕೆಗೆ (ಕಾನೂನು ಪದವಿ) | ರೂ. 775=00 |
| iii. | ಶರತ್ ಮೌಲ್ಯಮಾಪನಕ್ಕೆ ಪ್ರತಿ ಉತ್ತರ ಪತ್ರಿಕೆಗೆ | ರೂ. 4105=00 |
| iv. | ಅಂಕಗಳ ಮರು ಎಣಿಕೆಗಾಗಿ ಪ್ರತಿ ಉತ್ತರ ಪತ್ರಿಕೆಗೆ | ರೂ. 230=00 |
| v. | ಉತ್ತರ ಪತ್ರಿಕೆಯ ಛಾಯಾ ಪ್ರತಿಯ ಪ್ರತಿ ಉತ್ತರ ಪತ್ರಿಕೆಗೆ | ರೂ. 2=00 ಪ್ರತಿ ಪುಟಕ್ಕೆ & ರೂ. 60=00 ಅಂಚೆಯ ವೆಚ್ಚ |

೮. ಮರು ಮೌಲ್ಯಮಾಪನಕ್ಕೆ ಸಂಬಂಧಪಟ್ಟ ನಿರ್ದಿಷ್ಟ ದಿನಾಂಕಗಳನ್ನು ಸಂಬಂಧಪಟ್ಟ ತರಗತಿಯ ಫಲಿತಾಂಶವು **ಅಂತರ್‌ಜಾಲದಲ್ಲಿ ಪ್ರಕಟಗೊಂಡ** ಮುಖ ಪುಟದಲ್ಲಿ ಪ್ರಕಟಿಸಲಾಗುವುದು.

೯. ಅಂತರ್‌ಜಾಲದಲ್ಲಿ ದೊರೆಯುವ ಅಂಕಪಟ್ಟಿಯಲ್ಲಿ ನಮೂದಿಸಿದ ಕೊನೆಯ ದಿನಾಂಕ ವಿದ್ಯಾರ್ಥಿಗಳಿಗೆ ಅನ್ವಯವಾಗುತ್ತದೆ.

**೧೦. ಸದರ ಮಾಹಿತಿಯನ್ನು ತಮ್ಮ ಮಹಾವಿದ್ಯಾಲಯದ ವಿದ್ಯಾರ್ಥಿಗಳ ಗಮನಕ್ಕೆ ತಪ್ಪದೇ ತರಲು ಸೂಚಿಸಲಾಗಿದೆ.**

**ವಿಶೇಷ ಸೂಚನೆ:-**

೧. ಶುಲ್ಕವನ್ನು ಅಂತರ್‌ಜಾಲ (Online) ಮುಖಾಂತರ ಭರಿಸುವುದು. ಡಿ.ಡಿ./ನಗದು/ಚೆಕ್ ರೂಪದ ಸಂದಾಯಕ್ಕೆ ಅವಕಾಶವಿಲ್ಲ.

೨. ಶುಲ್ಕಗಳು ಪ್ರತಿ ಎರಡು ವರ್ಷಕ್ಕೆ ಪರಿಷ್ಕರಿಸುವ ನಿಬಂಧನೆಗೊಳಪಟ್ಟಿದೆ.

೩. ವಿದ್ಯಾರ್ಥಿಗಳು ನೇರವಾಗಿ ವಿಶ್ವವಿದ್ಯಾಲಯಕ್ಕೆ ಈ ಮೇಲ್ಕಂಡ ವಿಷಯದ ಕುರಿತು ಸಂಪರ್ಕಿಸಲು ಅವಕಾಶವಿರುವುದಿಲ್ಲ.

೪. 02ಕ್ಕಿಂತ ಹೆಚ್ಚು ವಿಷಯಗಳಿಗೆ ಮರು ಮೌಲ್ಯಮಾಪನ/ಶರತ್ ಮೌಲ್ಯಮಾಪನಕ್ಕೆ ಸಲ್ಲಿಸಿದ ಅರ್ಜಿಗಳನ್ನು ಯಾವುದೇ ಮುನ್ಸೂಚನೆ ಇಲ್ಲದೆ ತಿರಸ್ಕರಿಸಲಾಗುವುದು.

೫. ನಿಗದಿತ ಶುಲ್ಕ ಭರಿಸದಿದ್ದರೆ ಮತ್ತು ತಡವಾಗಿ ಸಲ್ಲಿಸಿದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ. ಅದರಂತೆ ಯಾವ ಪರೀಕ್ಷೆಗೆ ಸಂಬಂಧಪಡುತ್ತದೆಯೋ ಅದೆ ಪರೀಕ್ಷೆಗೆ ಶುಲ್ಕ ಭರಿಸಿ ಅರ್ಜಿಗಳನ್ನು (Up-load) ಮಾಡಿರಬೇಕು

೬. ಆಫ್‌ಲೈನ್ ಮುಖಾಂತರ ಸಲ್ಲಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

೭. ಅಂತರ್‌ಜಾಲ್ ಮುಖಾಂತರ ಸಲ್ಲಿಸಿದ ಮರು/ಶರತ್ ಮೌಲ್ಯಮಾಪನದ ವಿವರಗಳನ್ನೊಳಗೊಂಡ ವರದಿಯನ್ನು (Report) ಡೌನಲೋಡ ಮಾಡಿದ ಪ್ರತಿ ಹಾಗೂ ವಿದ್ಯಾರ್ಥಿಗಳು/ಮಹಾವಿದ್ಯಾಲಯದಿಂದ ಭರಿಸಿದ ಮೂಲ ಚಲನ್ ಪ್ರತಿಯನ್ನು ಲಗತ್ತಿಸಿ ಮಹಾವಿದ್ಯಾಲಯದ ಮುಖಾಂತರ ಸಲ್ಲಿಸತಕ್ಕದ್ದು.

6/5/23

ಕುಲಸಚಿವರು (ಮೌಲ್ಯಮಾಪನ)

ಗೆ,

೧. ಸಂಬಂಧಪಟ್ಟ ಎಲ್ಲ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ.

೨. ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಕಚೇರಿ/ಕುಲಸಚಿವರ ಕಚೇರಿ/ವಿತ್ತಾಧಿಕಾರಿಗಳ ಕಚೇರಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೩. ಉಪಕುಲಸಚಿವರು, ಪರೀಕ್ಷಾ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪. ಸಹಾಯಕ ಕುಲಸಚಿವರು ಪರೀಕ್ಷಾ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫. ಕುಲಸಚಿವರು (ಮೌಲ್ಯಮಾಪನ) ಇವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೬. ಉಪಕುಲಸಚಿವರು, ವಿದ್ಯಾಮಂಡಳ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೭. ನಿರ್ದೇಶಕರು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕ.ವಿ.ವಿ.ಧಾರವಾಡ. ಇವರಿಗೆ ಅಂತರ್‌ಜಾಲದ ಮುಖಪುಟದಲ್ಲಿ ಪ್ರಕಟಣೆಗಾಗಿ.

೮. ಅಧೀಕ್ಷಕರು, ಸಾಮಾನ್ಯ ಆಡಳಿತ (ಪರೀಕ್ಷಾ) ವಿಭಾಗ, ಕ.ವಿ.ವಿ.ಧಾರವಾಡ ಇವರ ಮಾಹಿತಿಗಾಗಿ ಹಾಗೂ ಸಂಬಂಧಪಟ್ಟ ಮಹಾವಿದ್ಯಾಲಯದ ಪ್ರಾಚಾರ್ಯರುಗಳಿಗೆ ಇ-ಮೇಲ್ ಮುಖಾಂತರ ಕಳುಹಿಸುವ ಕ್ರಮಕ್ಕಾಗಿ.

೯. ಸಿಸ್ಟಮ್ ಎನಾಲಿಸ್ಟ್ ಗಣಕಯಂತ್ರ ವಿಭಾಗ, ಕ.ವಿ.ವಿ.ಧಾರವಾಡ ಇವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.